ಡಿ.ಎಲ್. ನಾಗರಾಜ್, ಚನ್ನಗಿರಿ
*ಹೆಂಡತಿಗೆ ಅರ್ಧಾಂಗಿ ಎಂದು ಹೆಸರು ಬರಲು ಕಾರಣವೇನು?*



ಗಂಡಿನ ಮೇಲುಡುಗೆ(ಅಂಗಿ)ಗೆ ಬೇಕಾದ್ದು ಎರಡು ಮೀಟರ್, ಹೆಣ್ಣಿನ ಮೇಲುಡುಗೆಗೆ ಬೇಕಾದ್ದು ಒಂದು ಮೀಟರ್. ಆದ್ದರಿಂದ ಅರ್ಧಾಂಗಿ!

ಎ.ಪಿ. ರೇಣುಕಾ, ಹಾಸನ
*ಪ್ರತಿಷ್ಠೆಗೂ, ತಲೆಪ್ರತಿಷ್ಠೆಗೂ ಏನು ವ್ಯತ್ಯಾಸ ಸಾರ್?*
ಶಿರಬಾಗಿದರೆ ಪ್ರತಿಷ್ಠೆ. ಶಿರ ತೂಗಿದರೆ ತಲೆಪ್ರತಿಷ್ಠೆ!

ವಿ. ಹಮೀದ್, ವಿಟ್ಲ
*ಪ್ರೀತಿಸುತ್ತೀನಿ ಅಂತಾಳೆ, ಪ್ರೀತಿಯಲ್ಲೇ ಕೊಲ್ತಾಳಲ್ಲಾ...?*
ಒಪ್ಪಿಕೊಂಡುಬಿಡಿ. ನರ್ಸಿಂಗ್ ಹೋಂನಲ್ಲಿ ನರಳಿ ಸಾಯುವುದಕ್ಕಿಂತ ಪ್ರೇಮದಲ್ಲಿ ಮುಳುಗಿ ಸಾಯುವುದು ಮೇಲು!

ವಿರಾಜ್, ಅಡೂರು
*ಮಾನವನಿಗೆ ಲೌಕಿಕ, ಆಧ್ಯಾತ್ಮಗಳೆರಡೂ ಬೇಕಾಗುವ ಪ್ರಾಯ ಯಾವುದು?*
ಹದಿಹರೆಯವೇ! ಲೌ ದೊರೆತರೆ ಲೌಕಿಕ, ಕಿಕ್ ದೊರೆತರೆ ಅಧ್ಯಾತ್ಮ!

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ
*ಕತ್ತೆ ಹಾಗೂ ಮನುಷ್ಯರ ನಡುವಿನ ವ್ಯತ್ಯಾಸವೇನು?*
ಕತ್ತೆ ಹೊರೆ ಹೊರುತ್ತದೆ, ಮನುಷ್ಯ ತಾನೇ ಹೊರೆಯಾಗುತ್ತಾನೆ!

ವಿಜಯ್ ನರಹರಿ, ಆಸುಂಡಿ
*ಗುರುವೇ, ನಗುವುದು ಹೇಗೆ? ಎಂಬ ಪುಸ್ತಕ ಬರೆಯಬೇಕೆಂದಿದ್ದೇನೆ. ನಿಮ್ಮ ಅಭಿಪ್ರಾಯ?*



ಸದಾನಂದಗೌಡರು ಮತ್ತು ಶೋಭಾರ ಚಿತ್ರ ಹಾಕಿಬಿಡಿ; ಪದಗಳೇ ಬೇಡ!

ಜಿ.ಕಾಂತರಾಜು, ಗೌರಿಬಿದನೂರು
*ಗಂಡಹೆಂಡಿರ ಜಗಳ ಗಂಧ ತೀಡಿದ್ಹಾಂಗ; ಅತ್ತೆ ಸೊಸೆಯರ ಜಗಳ?*
ಗಂಧದ ಕೊರಡಿನಿಂದ ತೀಡಿದ್ಹಾಂಗ!

ವೈ.ಎನ್. ಕೃಷ್ಣಮೂರ್ತಿ, ರಾಮಾಂಜನೇಯನಗರ
*ಅಮೃತ ಸಮಾನವಾದ ಹಾಲು ದಿನದಿನಕ್ಕೆ ಹಾಲಾಹಲವಾಗುತ್ತಿದೆಯಲ್ಲಾ, ಮುಂದೆ ಏಡಮಕ್ಕಳ ಗತಿಯೇನು?*
ಬೆಲೆ ದುಬಾರಿಯಾದರೆ ಮಕ್ಕಳಿಗೆ ಹೆಚ್ಚುಕಾಲ ಅಮ್ಮನ ಎದೆಹಾಲು ದೊರೆತು ಒಳ್ಳೆಯದೇ ಆದೀತು!

ಸ್ನೇಹಲತಾ ಬೆಳ್ಮಣ್ಣು, ಬೆಳ್ಮಣ್ಣು
*ಅಕೌಂಟೆನ್ಸಿಯಲ್ಲಿ ಡೇ ಬುಕ್ ಮೇಂಯ್ನ್ ಟೇಯ್ನ್ ಮಾಡುತ್ತಾರೆ; ನೈಟ್ ಬುಕ್ ಏಕೆ ಮೇಂಯ್ನ್ ಟೇಯ್ನ್ ಮಾಡುವುದಿಲ್ಲ?*
ನೈಟ್‌ನಲ್ಲಿ ನಡೆಯುವುದೆಲ್ಲಾ ಕಳ್ಳ ವ್ಯವಹಾರವಾದುದರಿಂದ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ವ್ಯಂಗ್ಯಚಿತ್ರಕಾರನನ್ನು ಮದುವೆಯಾದವಳ ಜೀವನ ಹೇಗಿರುತ್ತದೆ?*
ಅವನು ಫೇಮಸ್ ಆದರೆ ಊರ್ಧ್ವರೇಖೆ, ಸಾಮಾನ್ಯನಾದರೆ ಸರಳ-ರೇಖೆ!

ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ
*ಹಣ್ಣೆಲೆ ಕಂಡು ಚಿಗುರೆಲೆ ಏಕೆ ನಗುತ್ತದೆ?*
ಗುಣ ಕಾಣದ ತರುಣನಿಗೆ ಸಾರ ಕಂಡ್ರೆ ತಾತ್ಸಾರ!

ಕುಬೇರಪ್ಪ ಎಂ.ವಿಭೂತಿ, ಹರಿಹರ
*ಎಷ್ಟು ಕಲಿತರೂ ತಾನು ಹೆಣ್ಣು ಎಂಬ ಸತ್ಯವನ್ನು ಸ್ತ್ರೀ ಮರೆತರೆ ತಪ್ಪು ಅಲ್ಲವೇ?*
ಚಿಂತೆ ಬೇಡ. ಅವಳು ಹೆಣ್ಣು ಎಂದು ಜ್ಞಾಪಿಸಲು ನಮ್ಮಲ್ಲಿ ಬೀದಿಕಾಮಣ್ಣಗಳ, ರತಿವೀಕ್ಷಣಾಮಂತ್ರಿಗಳ ದಂಡೇ ಇದೆ!

ಹೆಚ್.ಎನ್. ವಿಶ್ವನಾಥ್, ಶಿವಮೊಗ್ಗ
*ಸಿಬಿಐ ದಾಳಿಗೂ, ಬಿರುಗಾಳಿಗೂ ಏನಾದರೂ ವ್ಯತ್ಯಾಸವಿದೆಯೆ?*
ಬಿರುಗಾಳಿಯಲ್ಲಿ ಕೊಚ್ಚಿಹೋದದ್ದು ಮತ್ತೆ ದೊರಕದು!

ಹಾಡ್ಯ ಬಿ. ಜಯಾನಂದ, ಮೈಸೂರು
*ಇದ್ದಕ್ಕಿದ್ದಂತೆ ರಾವಣ ಎದುರಾದರೆ ಏನು ಮಾಡುತ್ತೀರಿ ರಾಮ್?*
ಈ ರಾಮಾಯಣವೇ ಬೇಡ, ಶೂರ್ಪಣಖಿಯನ್ನು ಕಳುಹಿಸು, ಪ್ಲಾಸ್ಟಿಕ್ ಸರ್ಜರಿ ಮಾಡಿಸಿ ಮದುವೆಯಾಗಿಬಿಡುತ್ತೇನೆ ಎನ್ನುತ್ತೇನೆ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಮನುಷ್ಯನಿಗೆ ಸಾಯುವ ಸಮಯ ಮತ್ತು ದಿನಾಂಕ ಮೊದಲೇ ತಿಳಿದಿದ್ದರೆ?*
ಅದಕ್ಕಿಂತ ಒಂದು ದಿನ ಹಿಂದಿನವರೆಗೆ ಮಾತ್ರ ವಿಮಾಕಂಪೆನಿಗಳು ವಿಮೆ ನೀಡುತ್ತಿದ್ದವು!

## ಬಹುಮಾನಿತ ಪ್ರಶ್ನೆ

ಎ.ಕೆ. ಪಟ್ಟಾಭಿ, ಬೆಂಗಳೂರು
*ಅಭಯಹಸ್ತವನ್ನು ಪ್ರದರ್ಶಿಸುವ ದೇವರುಗಳೆಲ್ಲಾ ಕಾಂಗ್ರೆಸ್ ಪಕ್ಷಪಾತಿಗಳೇ?*
ಹಾಗೇನಿಲ್ಲ; ಕಮಲದ ಮೇಲಿನ ಬ್ರಹ್ಮ ಭಾಜಪ, ಗಣೇಶ ಮಾಯಾವತಿಯ ಪಕ್ಷ, ಹುಲ್ಲೂರಮ್ಮ ಜೆಡಿಎಸ್....!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ಅಷ್ಟಾವಕ್ರ ಗೋತ್ರೋತ್ಪನ್ನ ಸಾಹಿತಿಗಳೆ, ನಿಮ್ಮ ನಾಮಧೇಯಕ್ಕೂ, ಸಾಹಿತ್ಯಕ್ಕೂ ಅಜಗಜಾಂತರವಿದೆಯಲ್ಲಾ...?*
nay, go, ಎನ್ನುತ್ತಾ ನಕಾರವನ್ನೇ ಹೊಂದಿ but... ಎಂದು ಅಡ್ಡಮಾತಾಡುವವರಿರುವಾಗ ಇನ್ನು ಹೇಗೆ ಇರಲು ಸಾಧ್ಯ ಬಿಡಿ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕೃಷ್ಣ ದ್ರೌಪದಿಗೆ ಕೊಟ್ಟ ಸೀರೆಗೂ, ರಾಜಕೀಯ ನಾಯಕ ಮತದಾರರಿಗೆ ಕೊಡುವ ಸೀರೆಗೂ ಏನು ವ್ಯತ್ಯಾಸ?*
ಅದು ಉದ್ದ ಬೆಳೆಯಿತು, ಇದು ಶ್ರಿಂಕ್ ಆಗುತ್ತದೆ!

ಮಹೇಶ್ ಹೆಗಡೆ, ಹೆಗ್ಲೆ
*ಖಾಕಿ, ಖಾದಿ, ಖಾವಿ ಈ ಮೂರ್ ಖ ರಲ್ಲಿ ಯಾರು ಅತಿ ಭ್ರಷ್ಟರು?*




ಇರಿ, ಇರಿ... ನಂಬರ್ ಒನ್ ಭ್ರಷ್ಟ ಪಟ್ಟಕ್ಕೆ ತೀವ್ರ ಸ್ಪರ್ಧೆ ನಡೆದಿದೆ; ವಿಜೇತರು ಘೋಷಿತವಾದ ತಕ್ಷಣ ಹೇಳುತ್ತೇನೆ!

ಬಿ.ವಿ. ನಾರಾಯಣ್, ಬೆಳಗೋಡು
*ಹೆಣ್ಣಿಗೆ ಹೆಣ್ಣೇ ಶತ್ರು ಅಂತಾರೆ. ಹಾಗಾದ್ರೆ ಗಂಡಿಗೆ?*
ಆಫೀಸಿನ ಬಾಸ್, ಮನೆಯ ಬಾಸ್, ಪ್ರೇಯಸಿಯ ಅಣ್ಣ/ಅಪ್ಪ, ಸಾಲ ಕೊಟ್ಟವನು, ಪ್ರೊಮೋಷನ್ ಪಡೆದ ಕೊಲೀಗ್.......... ಪಟ್ಟಿ ಅನಂತ!

ಪೇಂಟರ್ ಪಾಪು, ಸಂತೇಮರಹಳ್ಳಿ
*ಮದುವೆ ಮಂಟಪಗಳಲ್ಲಿ ಬ್ರಹ್ಮಚಾರಿಗಳಿಗೆ ಏನು ಕೆಲಸ?*
ಸ್ತ್ರೀವಿಮೋಚನೆ - ಸೂಕ್ತ ಕನ್ಯೆಯನ್ನು ಹುಡುಕಿ ಕನ್ಯಾಸೆರೆಯಿಂದ ಬಿಡಿಸುವರಂತೆ!

ಬಿ. ಚಂದ್ರೇಗೌಡ, ಬೆಂಗಳೂರು
*ಹೆಣ್ಣಿಗೆ ನಾಚಿಕೆ ಆಭರಣ; ಗಂಡಿಗೆ...?*
ಗುಂಡಿಗೆ!

■ ರಾಮ್